# ದೇವ ನಗರಿ ಕ್ಯೋಟೊ



**ವಿಶ್ವಮಹಾಯುದ್ಧದ ವೇಳೆ ಮೊದಲಿಗೆ ಜಪಾನ್‌ನ ಈ ನಗರದ ಮೇಲೆಯೇ ಬಾಂಬ್ ಹಾಕಲು ನಿರ್ಧರಿಸಲಾಗಿತ್ತು. ಆದರೆ ಬಾಂಬ್ ಹಾಕಬೇಕಾಗಿದ್ದ ಅಧಿಕಾರಿ, ತನ್ನ ಹನಿಮೂನ್‌ಗೆ ಹಿಂದೆ ಈ ನಗರಕ್ಕೇ ಬಂದಿದ್ದ. ಆತನಿಗೆ ಬಾಂಬ್ ಹಾಕಿ ಈ ನಗರವನ್ನು ನಾಶ ಮಾಡಲು ಮನಸ್ಸೇ ಬರಲಿಲ್ಲ!**

**★ ಚಿತ್ರ- ಲೇಖನ: ಡಾ.ಡಿ.ವಿ.ಗುರುಪ್ರಸಾದ್**

ಜಪಾನಿ ಭಾಷೆಯಲ್ಲಿ ರಾಜಧಾನಿ ಎಂದೇ ಅರ್ಥ ಬರುವ ಕ್ಯೋಟೊ ನಗರ, ಸುಮಾರು ಹನ್ನೊಂದು ಶತಮಾನಗಳ ಕಾಲ ಆ ದೇಶದ ರಾಜಧಾನಿಯಾಗಿತ್ತು. ಹೋನ್‌ಷೂ ದ್ವೀಪದಲ್ಲಿ ಇರುವ ಈ ನಗರದಲ್ಲಿ ಜಪಾನ್ ದೇಶದ ಅತಿ ಪ್ರಾಮುಖ್ಯ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸ್ಥಳಗಳು ಇವೆ. ಹಾಗೆಂದೇ ಬಹಳಷ್ಟು ಜನರು ಇಲ್ಲಿರುವ ದೇಗುಲಗಳು ಹಾಗೂ ಉದ್ಯಾನಗಳನ್ನು ನೋಡಲು ಬರುತ್ತಾರೆ. ಕ್ಯೋಟೊ ನಗರದಲ್ಲಿ ಸುಮಾರು 1600 ಬೌದ್ಧ ದೇವಾಲಯಗಳು ಹಾಗೂ 400 ಶಿಂಟೋ ದೇವಾಲಯಗಳು ಇವೆ. ನಗರದ ಮಧ್ಯಭಾಗದಲ್ಲಿ ಹರಿಯುವ ನದಿಯ ಸುತ್ತಮುತ್ತಲೂ ಅಸಂಖ್ಯಾತ ಉದ್ಯಾನವನಗಳಿವೆ. ಜಪಾನಿನ ಹೆಸರಾಂತ ಚೆರ್‍ರಿ ಬ್ಲಾಸಂ ಹೂಗಳ ಮರಗಳು ಈ ನದಿಯ ಹಾಗೂ ಸುತ್ತಮುತ್ತಲಿನ ಗುಡ್ಡಗಳಲ್ಲಿ ಇರುವುದರಿಂದ, ಹೂಗಳು ಬಿಡುವ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಪ್ರವಾಸಿಗರ ಪ್ರವಾಹವೇ ಇಲ್ಲಿಗೆ ಹರಿದು ಬರುತ್ತದೆ.

ವಿಶ್ವ ಮಹಾಯುದ್ಧದ ಸಮಯದಲ್ಲಿ ಜಪಾನಿನ ಮೇಲೆ ಅಣುಬಾಂಬ್‌ಅನ್ನು ಹಾಕಲು ತೀರ್ಮಾನ ತೆಗೆದುಕೊಂಡಾಗ ಕ್ಯೋಟೊ ನಗರವೇ ಬಾಂಬ್ ಹಾಕಬೇಕೆಂದಿದ್ದ ನಗರಗಳ ಪಟ್ಟಿಯಲ್ಲಿ ಮೊದಲನೆಯದಾಗಿತ್ತು. ಆದರೆ ವಿಶ್ವದ ಅದೃಷ್ಟ, ಬಾಂಬ್ ಹಾಕುವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದ್ದ ಅಧಿಕಾರಿಯೊಬ್ಬ ಹಿಂದೆ ತನ್ನ ಹನಿಮೂನ್‌ಗಾಗಿ ಈ ನಗರಕ್ಕೇ ಬಂದಿದ್ದ. ಹಾಗಾಗಿ ಕ್ಯೋಟೊವನ್ನು ಹಾಳುಗೆಡವದೇ ಇಡಲು ನಿರ್ಧರಿಸಿ ಆತ ಇದರ ಹೆಸರನ್ನು ಪಟ್ಟಿಯಿಂದ ತೆಗೆದುಬಿಟ್ಟ. ಹೀಗಾಗಿ ಈ ನಗರ ಅಂದು ನಶಿಸದೇ ಉಳಿಯಿತು.

ಕ್ಯೋಟೊ ನಗರದ ಅತ್ಯಂತ ಪ್ರಮುಖ ದೇವಾಲಯ ಕಿಯೋಮಿಜೂ ಡೇರಾ. ಜಪಾನೀ ಭಾಷೆಯಲ್ಲಿ ಇದರ ಅರ್ಥ ಪರಿಶುದ್ಧ ನೀರಿನ ದೇಗುಲ. ಸಂಪೂರ್ಣವಾಗಿ ಮರದಿಂದಲೇ ನಿರ್ಮಿಸಿರುವ ಈ ದೇವಾಲಯವನ್ನು ಕ್ಯೋಟೊ ನಗರದ ಹೊರವಲಯದಲ್ಲಿ ಇರುವ ಓಟ್ಟಾವಾ ಬೆಟ್ಟದ ಮಧ್ಯಭಾಗದಲ್ಲಿ ಕ್ರಿ.ಶ 778ರಲ್ಲಿ ನಿರ್ಮಿಸಲಾಗಿದೆ.

ಕಿತ್ತಲೆ ಬಣ್ಣದ ಈ ದೇವಾಲಯ ದೂರದಿಂದಲೇ ವೈಭವದಿಂದ ಕಂಗೊಳಿಸುತ್ತಿತ್ತು. ದೇವಾಲಯದ ಹೊರಗಿನ ಕೊಳದಲ್ಲಿ ಕೈ, ಕಾಲು ಹಾಗೂ ಮುಖವನ್ನು ತೊಳೆದುಕೊಂಡು ದೇವಾಲಯವನ್ನು ಪ್ರವೇಶಿಸಿ ಅಲ್ಲಿನ ವಿಶಾಲವಾದ ಹಜಾರದಿಂದ ನಗರದ ವಿಹಂಗಮ ನೋಟವನ್ನು ನೋಡಿದೆವು.

ಈ ದೇವಾಲಯ ಕಾನ್ನನ್ ಎನ್ನುವ ಹೆಣ್ಣು ದೇವತೆಗೆ ಮೀಸಲು. ಈ ದೇವತೆಗೆ ಹನ್ನೊಂದು ತಲೆಗಳು ಹಾಗೂ ನಲವತ್ತೆರಡು ಕೈಗಳು ಇದ್ದು, ದೇವತೆಯ ಕಣ್ಣುಗಳು ಮುಚ್ಚಿಕೊಂಡಿವೆ. ನಮಸ್ಕಾರ ಮಾಡುವ ಭಂಗಿಯಲ್ಲಿ ನಿಂತಿರುವ ದೇವಿಯ ಎರಡು ಕೈಗಳು ಜೋಡಿಸಿದ್ದರೆ, ಇನ್ನೆರಡು ಕೈಗಳು ಬುದ್ಧನ ಭಂಗಿಯಲ್ಲಿವೆ. ತನ್ನ ಕರುಣೆಗೆ ಬಹಳ ಹೆಸರುವಾಸಿಯಾಗಿರುವ ಈ ದೇವಿಯ ಸನ್ನಿಧಿಯಲ್ಲಿ ಪ್ರಾರ್ಥನೆ ಮಾಡಿದರೆ ಭಕ್ತರ ಕಷ್ಟಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆಯಿದ್ದು ಇಲ್ಲಿಗೆ ಅಸಂಖ್ಯ ಜನರು ಬರುತ್ತಾರೆ. ಇಲ್ಲಿ ಶಬ್ದ ಮಾಡದೇ ಕೈಗಳನ್ನು ಜೋಡಿಸಿ ಪೂಜೆ ಮಾಡಬೇಕು.

'ಈ ಬುದ್ಧ ದೇವಾಲಯದಲ್ಲಿ ಹೆಣ್ಣು ದೇವತೆ ಏಕೆ?' ಎಂದು ನನ್ನ ಜತೆಯಿದ್ದ ಗೈಡ್‌ನನ್ನು ಪ್ರಶ್ನಿಸಿದೆ. 'ನಿಮ್ಮ ದೇಶದಲ್ಲಿ ಭಗೀರಥ ಗಂಗೆಯನ್ನು ಕರೆತಂದ ಹಾಗೆಯೇ ನಮ್ಮ ದೇಶದಲ್ಲೂ ಈ ದೇವತೆಯಿಂದಲೇ ನೀರು